ಬೇಡಬೇಡವೆಂದುಕೊಳ್ಳುತ್ತಲೇ ಅವನು ಅವಕಾಶ ಸಿಕ್ಕಾಗಲೆಲ್ಲ ಏನಾದರೊಂದು ಕುಹಕವಾಡಿ ಅವಳಿಗೆ ಅವಮಾನವಾಗುವಂತೆ ಮಾತಾಡಲು ಹಾತೊರೆಯುತ್ತಿದ್ದ. ಮೊದಲ ಗೋಷ್ಠಿಯ ನಾಲ್ಕು ಕವಿತೆಗಳ ಓದು ಮುಗಿದರೂ ಅವಳಿನ್ನೂ ತಲುಪಿರಲಿಲ್ಲ. ಲೋಹಿತೇಶ್ವರನಲ್ಲಿ ಚಡಪಡಿಕೆ ಶುರುವಾಗಿತ್ತು. ಹುಡುಗರ ಬಳಿ ವಿಚಾರಿಸಲು ಹೇಳಿದ. ಅವಳನ್ನು ಸಂಪರ್ಕಿಸಿದ ವಾಲಂಟಿಯರ್ ಹುಡುಗರು, ಬರುತ್ತಿದ್ದಾರಂತೆ. ರೋಡ್ ಬ್ಲಾಕ್ ಇತ್ತಂತೆ' ಎಂದರು. ಬರದೆಯೇ ಧಿಕ್ಕರಿಸುತ್ತಾಳೆಯೇ... ಸುಮ್ಮಸುಮ್ಮನೆ ಬ್ಲಾಕ್ ಇದೆ ಎಂದಿದ್ದಿರಬಹುದೇ...? ಸಣ್ಣ ಸಂಶಯ ಸುರುವಾಯಿತು..

* * *

ಕಿರಿಕಿರಿ ಮನಸ್ಸಿನಿಂದಲೇ ಆಯೋಜಕರು ಕಳುಹಿಸಿದ ಲೊಕೇಷನ್ನಿಗೆ ಕ್ಯಾಬ್ ಬುಕ್ ಮಾಡಿದ್ದಳು ರಮಣಿ. ನಗರದ ಹೊರವಲಯದಲ್ಲಿರುವ ಹೊಚ್ಚ ಹೊಸ ಆಡಿಟೋರಿಯಮ್. ಅಲ್ಲಿ ಇದು ಮೊದಲ ಸಾಹಿತ್ಯಿಕ ಕಾರ್ಯಕ್ರಮ ಅಂದಿದ್ದರು ಆಯೋಜಕರು. ಅಲ್ಲಿಗೆ ತಲುಪಲು ಅವಳಿರುವಲ್ಲಿಂದ ಒಂದೂವರೆ ಗಂಟೆ ಸಮಯ ಬೇಕು ಅನ್ನುತ್ತಿತ್ತು ಮ್ಯಾಪ್. ರಸ್ತೆ ರಿಪೇರಿ ನಡೆಯುತ್ತಿದ್ದುದರಿಂದ ತಲುಪುವಾಗ ಅದಕ್ಕಿಂತಲೂ ತುಸು ತಡವೇ ಆಯಿತು. ಪ್ರವೇಶ ದ್ವಾರದಲ್ಲಿ ನಿಲ್ಲಿಸಿದ ಮೇಲ್ವಿಚಾರಕ ವಿವರ ಪಡೆದು ಕೊಂಡು ಕಾರನ್ನು ಒಳ ಬಿಟ್ಟ. ಅವಳದು ಎರಡನೆಯ ಗೋಷ್ಠಿ. ಅವಳು ಪ್ರತಿಕ್ರಿಯಿಸಬೇಕಾದ್ದು ಸಂಜೆಯ ಗೋಷ್ಠಿಯ ಕವಿತೆಗಳಿಗೆ. ಆದರೂ ಕಾರ್ಯಕ್ರಮ ಶುರುವಾಗುವ ಹೊತ್ತಿಗೆ ಸೇರಿಕೊಳ್ಳಬೇಕಾದ್ದು ಶಿಷ್ಟಾಚಾರ ಮಾತ್ರವಲ್ಲ, ಜವಾಬ್ದಾರಿ. ಅರೆ ಮನದಿಂದ ಹೊರಟವಳಿಗೆ ಈಗ ತಪ್ಪಿತಸ್ಥ ಭಾವವೂ ಸೇರಿಕೊಂಡಿತು. ಅವಳಿರುವ ಗೋಷ್ಠಿಯ ಹೆಸರು 'ಕಾವ್ಯ; ಹೊರಮೈ.' ಆಯೋಜಕರು ಅವಳ ಒಪ್ಪಿಗೆ ಪಡೆದೇ ಆ ಗೋಷ್ಠಿಗೆ ಅವಳ ಹೆಸರು ಹಾಕಿದ್ದರು. 'ಕಾವ್ಯ ಹೊರಮೈ; ಕಾವ್ಯ ಒಳಮೈ; ಕಾವ್ಯ ಒಳಹೊರ ಮೈ' ಎಂಬ ಮೂರು ಆಯಾಮದಲ್ಲಿ ಆ ಕಾರ್ಯಕ್ರಮವನ್ನು ಸಂಯೋಜನೆ ಮಾಡಿದ್ದರು. ಈ ಎಲ್ಲ ಪರಿಕಲ್ಪನೆಯ ಹಿಂದಿರುವುದು ಲೋಹಿತೇಶ್ವರ. ತನ್ನನ್ನು ಒಳಗೊಳಗೇ ದ್ವೇಷಿಸುವ ಕೇವಲವಾಗಿ ಪರಿಗಣಿಸುವ ಲೋಹಿತೇಶ್ವರನೇ ತನ್ನ ಹೆಸರು ಸೂಚಿಸಿದ್ದಾನೆಂದರೆ ಇದರಲ್ಲೇನಾದರೂ ಒಳ ಮರ್ಮ ಇರಬಹುದೇ ಎಂದೂ ಅನಿಸುತ್ತಿತ್ತು. ಕಾರು ಸುತ್ತಿ ಸುತ್ತಿ ಒಳ ಒಳಗೆ ಹೋಗುವಂಥ ದಾರಿ. ಇಕ್ಕೆಲಗಳ ಹಸುರು, ನಡು ನಡುವಿನ ಕಲಾಕೃತಿಗಳು ಅವಳ ಎಲ್ಲ ಕಿರಿಕಿರಿ ನಿವಾರಿಸಿ ಮನಸು ಯಾವುದೋ ಪರವಶಕ್ಕೊಳಗಾಗಿ ನಿರಾಳವಾದಳು. ಕೆಮ್ಮಣ್ಣಿನ ಬಣ್ಣದ ಕಲಾತ್ಮಕ ಕಟ್ಟಡ. ಒಳ ಹೋದರೆ ಅರ್ಧ ಚಂದ್ರಾಕಾರ ಮಾದರಿಯಲ್ಲಿ ಆಸನಗಳು. ವಾಲಂಟಿಯರ್ ಹುಡುಗ, ಹುಡುಗಿಯರು ಅವಳ ಬಳಿ ಬಂದು ಆಸನದ ಬಳಿ ಅವಳನ್ನು ಕರೆದೊಯ್ದರು. ಕುಳಿತಲ್ಲಿಂದಲೇ ರಮಣಿ ಅಕ್ಕಪಕ್ಕ ಕಣ್ಣು ಹಾಯಿಸಿದಳು. ಎಲ್ಲರೂ ಪರಿಚಿತರೇ. ಲೋಹಿತೇಶ್ವರ ಆ ಸಾಲಿನಲ್ಲಿ ಕಾಣಿಸಲಿಲ್ಲ. ಎರಡನೆಯ ಗೋಷ್ಠಿಯಲ್ಲಿ ಕೊನೆಯವಳಾಗಿ ಕವಿತೆ ಓದುವ ಸರದಿ ರಮಣಿಯದು. ಅದಾದ ಮೇಲೆ ಚಹಾ ವಿರಾಮವಿದ್ದಿದ್ದರಿಂದ ಕುಳಿತವರು ತುಸು ಅತ್ತಿತ್ತ ಜರುಗಲಾರಂಭಿಸಿದ್ದರು. ರಮಣಿ ವೇದಿಕೆಯಿಂದ ಕೆಳಗಿಳಿದು ಬಂದವಳು ಇನ್ನೇನು ತನ್ನ ಆಸನಕ್ಕೆ ಹೋಗಬೇಕು. ಅಷ್ಟರಲ್ಲಿ ಅದೇ ಹಿಂದಿನ ಸಾಲಿನಲ್ಲಿ ಕುಳಿತಿದ್ದ ಲೋಹಿತೇಶ್ವರ, "ನಿಮ್ಮ ಕವಿತೆ ಚೆನ್ನಾಗಿತ್ತು. ಆದ್ರೂ ಸ್ವಲ್ಪ ಶಾರ್ಪ್ ಮಾಡಿದ್ದಿದ್ರೆ ಬರ್ಫದ ಕತ್ತಿ ಮೊನೆಯಂತೆ ತಣ್ಣಗೆ ಇರಿಯುತಿತ್ತು. ಈಗ ಚಿಟ್ಟೆ ರೆಕ್ಕೆ ಮೇಲಿನ ಕುಸುಮದ ಹಾಗಿದೆ" ಅಂದ. ಅದು ಅವನ ಒಂದು ಪ್ರಸಿದ್ಧ ಕವಿತೆಯ ಸಾಲೂ ಹೌದು. ಅವಳು ಥ್ಯಾಂಕ್ಸ್ ಅಂದು ಮುನ್ನಡೆಯಬೇಕು. ಥಟ್ಟನೆ ಲೋಹಿತೇಶ್ವರ, 'ಅಲ್ರೀ, ರಮಣಿ. ತುಂಬಾ ಕಂಗಾಲಾದಂತೆ ಕಾಣ್ತಿದೀರಿ. ಜನ ನೋಡ್ಕೊಂಡು ವಹಿವಾಟು ನಡೆಸಿ. ಬಹಳ ಪೀಚಲಾಗಿಬಿಟ್ಟದ್ದೀರಿ' ದೇಶಾವರಿ ನಗುವಿನ ಜೊತೆಗೆ ನಿಗೂಢ ಅರ್ಥ ಹೊಮ್ಮಿಸುವಂತ ನೋಟವೊಂದನ್ನು ಅಕ್ಕಪಕ್ಕ ಕುಳಿತವರತ್ತ ಎಸೆದ. ಅನಿರೀಕ್ಷಿತ ದಾಳಿ.

'ನಿಮ್ಮ ಜೊತೆ ವಹಿವಾಟು ನಡೆದಿಲ್ಲ ಅಲ್ವ. ಹಾಗಾಗಿ ನೀವಂದುಕೊಂಡಂತೆ ಏನೂ ಆಗಿಲ್ಲ ಬಿಡಿ. ಮತ್ತೆ ಥ್ಯಾಂಕ್ಸ್ ನಿಮ್ಮ ಕಾಳಜಿಗೆ' ಸುತ್ತಲಿದ್ದವರ ಕಣ್ಸೆರೆ ಹಿಡಿದೇ ಪ್ರತಿಕ್ರಿಯಿಸಿದ ಅವಳದು ತಣ್ಣಗಿನ ಸ್ಪಷ್ಟವಾದ ಇರಿಯುವ ಧ್ವನಿ. ಅವಳಿಗೂ ಅವಳ ಪ್ರತಿನುಡಿ ಅನಿರೀಕ್ಷಿತವೇ. ಸುತ್ತಲಿದ್ದವರು ಗೊಳ್ಳನೆ